ನನಗೆ ಯಾವಾಗ ನಿದ್ದೆ ಹತ್ತಿತೋ ತಿಳಿಯಲಿಲ್ಲ. ಬೆಳಿಗ್ಗೆ "ಡಾರ್ಲಿಂಗ್... ಆರು ಗಂಟೆಯಾಗಿದೆ ಎದ್ದೇಳಿ..." ಎಂದು ವಸುಂಧರೆ ತನ್ನ ಇಂಪಾದ ದನಿಯಲ್ಲಿ ಕೂಗಿದಾಗ ಎಚ್ಚರವಾಯಿತು. ಕಣ್ಣು ಬಿಟ್ಟು ನೋಡಿದೆ. ಆಗಲೇ ಸ್ನಾನ ಮಾಡಿ ಸಿದ್ಧವಾಗಿದ್ದಳು! "ನಾನು ತಣ್ಣೀರಿನಲ್ಲಿಯೇ ಸ್ನಾನ ಮಾಡಿದ್ದೇನೆ. ಡ್ಯಾಡ್ ಬಿಸಿನೀರನ್ನು ಉಪಯೋಗಿಸಬಾರದೆಂದು ಹೇಳಿದ್ದಾರೆ. ನಿಮಗೆ ಗೀಸರ್ ಆನ್ ಮಾಡಿದ್ದೇನೆ..." ಎಂದು ಮೆಲುದನಿಯಲ್ಲಿ ನುಡಿದಾಗ, ನನ್ನ ಜೀವನದಲ್ಲಿ ಏನಾಗುತ್ತಿದೆಯೆಂದು ತಿಳಿಯದೆ ಒಂದು ಕ್ಷಣ ತೀವ್ರ ಗೊಂದಲವಾಯಿತು.

ಮುಂದಿನ ದಿನಗಳಲ್ಲಿ ವಸುಂಧರೆ, ಸ್ವಂತ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಮತ್ತು ಭಾವನೆಗಳಿಗೆ ಪ್ರತಿಸ್ಪಂದಿಸುವ ಮಾನವಸಹಜ ಸಂವೇದನೆಗಳು ಇಲ್ಲವೆಂಬುದನ್ನು ಹೊರತುಪಡಿಸಿದರೆ, ನನ್ನ ಆಪ್ತ ಸ್ನೇಹಿತೆಯಾದಳು. ಅವಳ ಒಡನಾಟದಿಂದ ನನ್ನ ಬದುಕಿಗೆ ಹೊಸ ಹುರುಪು, ಉತ್ಸಾಹಗಳು ತುಂಬಿಕೊಂಡವು. ಅವಳೊಂದು ಯಂತ್ರವೆಂಬ ಆಲೋಚನೆ ನನ್ನ ಮನಸ್ಸಿನಿಂದ ದೂರವಾಗಿ ನಾನು ಅವಳನ್ನು ಬಿಟ್ಟಿರಲು ಸಾಧ್ಯವಿಲ್ಲವೆಂಬ ಮನಃಸ್ಥಿತಿಯನ್ನು ನನಗೆ ಅರಿವಿಲ್ಲದಂತೆಯೇ ತಲುಪಿಬಿಟ್ಟೆ. ಅವಳಿಗೆ ಮಾನವನನ್ನು ಮೀರಿಸುವ ಪ್ರತಿಭೆಯಿತ್ತು. ನಾನು ಅವಳಿಗಾಗಿ ಚೆಸ್, ಕೇರಂ ಬೋರ್ಡ್ ಮುಂತಾದ ಆಟದ ಸಾಮಗ್ರಿಗಳನ್ನು ಕೊಂಡುತಂದೆ. ಆದರೆ ಅವಳನ್ನು ಒಂದು ದಿನವೂ ನನ್ನಿಂದ ಯಾವ ಆಟದಲ್ಲಿಯೂ ಸೋಲಿಸಲಾಗಲಿಲ್ಲ. ಟೀವಿಯಲ್ಲಿ ಬರುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಿ ಅವುಗಳನ್ನು ಯಥಾವತ್ತಾಗಿ ಅನುಕರಿಸುವ ಸಾಮರ್ಥ್ಯ ಪಡೆದಿದ್ದಳು. ಭರತನಾಟ್ಯವನ್ನಾಗಲೀ ಹಾಡು ಹೇಳುವುದನ್ನಾಗಲೀ ಮೂಲ ಕಲಾವಿದರಂತೆಯೇ ಕಿಂಚಿತ್ತೂ ವ್ಯತ್ಯಾಸವಿಲ್ಲದಂತೆ ಪುನರಾವರ್ತಿಸುತ್ತಿದ್ದಳು. ಆದರೆ ಆಕೆಗೆ ಯಾವುದನ್ನೂ ಹೊಸದಾಗಿ ಸೃಷ್ಟಿಸುವುದು ಸಾಧ್ಯವಿರಲಿಲ್ಲ. ಎಲ್ಲವೂ ಒಂದೇ ಮಾದರಿ. ಮನೆ ಪೂರ್ತಿ ಸ್ವಚ್ಛವಾಗಿರುತ್ತಿದ್ದರೂ ಪ್ರತಿದಿನ ಯಾವ ಸಾಮಾನು ಎಲ್ಲಿರುತ್ತದೆಯೋ ಅಲ್ಲಿಯೇ ಇರುತ್ತಿತ್ತು. ನಾನು ಪರೀಕ್ಷಿಸಲೆಂದು ಸೋಫಾವೊಂದನ್ನು ಅತ್ತ ಸರಿಸಿ ಹೋದರೆ ಮತ್ತೆ ಅದು ಅದರ ಸ್ವಸ್ಥಾನಕ್ಕೆ ಮರಳುತ್ತಿತ್ತು. ನಾನು ನನ್ನ ಉಡುಪುಗಳನ್ನು ವಾರ್ಡ್‌ರೋಬಿನ ಆಕೆಯ ಭಾಗದಲ್ಲಿಟ್ಟರೆ ಅವು ಪುನಃ ಎಲ್ಲಿದ್ದವೋ ಅಲ್ಲಿಗೆ ವಾಪಸು ಬಂದಿರುತ್ತಿದ್ದವು.

ನಾನು ಅವಳನ್ನು ಕರೆದುಕೊಂಡು ಬಹಳಷ್ಟು ದಿನ ಕಾರಿನಲ್ಲಿ ಲಾಂಗ್ ಡ್ರೈವ್ ಹೋಗುತ್ತಿದ್ದೆ. ನಾನು ಕಾರನ್ನು ಚಾಲನೆ ಮಾಡುವುದನ್ನು ನೋಡಿಯೇ ಅವಳು ಯಾವುದೇ ಚ್ಯುತಿಯಿಲ್ಲದಂತೆ ಕಾರನ್ನು ನಡೆಸುತ್ತಿದ್ದಳು. ಒಂದು ಬಾರಿ ನೋಡಿದರೆ ಸಾಕು ಎಲ್ಲವನ್ನೂ ಪುನರಾವರ್ತಿಸುತ್ತಿದ್ದಳು. ನಗರ ಪ್ರದೇಶಗಳಲ್ಲಿ ಆಕೆಯ ಬಳಿ ಚಾಲನಾ ಪರವಾನಗಿ ಇಲ್ಲ, ಪೊಲೀಸರು ಹಿಡಿದರೆ ಮತ್ತೊಂದು ಸಮಸ್ಯೆ ಪ್ರಾರಂಭವಾದೀತು ಎಂದು ಆಕೆಗೆ ಕಾರನ್ನು ನಡೆಸಲು ಕೊಡುತ್ತಿರಲಿಲ್ಲ. ಅವಳು ಮತ್ತು ನಾನು ರಜಾದಿನಗಳಲ್ಲಿ ಹಲವಾರು ಬೆಟ್ಟ–ಗುಡ್ಡಗಳಿಗೆ ಟ್ರೆಕ್ಕಿಂಗ್ ಹೋಗುತಿದ್ದೆವು. ಅದಕ್ಕಾಗಿ ನಾನು ಒಂದು ಹೊಸ ಬೈಕನ್ನೂ ಕೊಂಡುಕೊಂಡೆ. ಆ ಹೊಸ ಬೈಕನ್ನೂ ಕೂಡ ವಸುಂಧರೆ ಲೀಲಾಜಾಲವಾಗಿ ಓಡಿಸುತ್ತಿದ್ದಳು. ನಾವಿಬ್ಬರೂ ತಂಪು ಕನ್ನಡಕಗಳನ್ನು ಹಾಕಿಕೊಂಡು ಬೈಕನ್ನೇರಿ ಹೊರಟರೆ ನನಗೆ ಸ್ವರ್ಗದಲ್ಲಿದ್ದಂತೆ ಭಾಸವಾಗುತ್ತಿತ್ತು.

ಇದೆಲ್ಲದರ ಮಧ್ಯೆ ಪ್ರೊಫೆಸರರು ಮೂರ್ನಾಲ್ಕು ಬಾರಿ ಫ್ಲ್ಯಾಟಿಗೆ ಬಂದು ವಸುಂಧರೆಯನ್ನು ನೋಡಿಕೊಂಡು ಹೋದರು. ಕೆಲವೊಮ್ಮೆ ನನಗೆ ಫೋನು ಮಾಡಿ ವಸುಂಧರೆಗೆ ಸಂಬಂಧಿಸಿದಂತೆ ಹಲವಾರು ವಿಷಯಗಳ ಬಗ್ಗೆ ಪ್ರಶ್ನಿಸಿ ನನ್ನಿಂದ ಉತ್ತರವನ್ನು ಪಡೆದುಕೊಳ್ಳುತ್ತಿದ್ದರು.

ನಾನು ಮತ್ತು ವಸುಂಧರೆ ಒಟ್ಟಿಗೆ ಜೀವಿಸಲು ಪ್ರಾರಂಭಿಸಿ ಒಂದು ವರ್ಷ ತುಂಬಲು ಇನ್ನು ಎರಡು ದಿನಗಳು ಬಾಕಿಯಿದ್ದವು. ನಾನು ವಸುಂಧರೆಯನ್ನು ಬಹಳವಾಗಿ ಹಚ್ಚಿಕೊಂಡಿದ್ದೆ. ನಮ್ಮ